ಖಾದಿ ಉಡುಪಿಗೆ ಕಾಲದ ಹಂಗಿಲ್ಲ. ಎಲ್ಲ ಕಾಲಕ್ಕೂ ಸೂಕ್ತವಾಗುವ, ಎಲ್ಲ ವಯೋಮಾನಕ್ಕೂ ಒಪ್ಪುವ, ಫ್ಯಾಷನ್‌ಗೂ ಸಂಪ್ರದಾಯಕ್ಕೂ ಸೈ ಎನ್ನುವ ಉಡುಪು ಖಾದಿ. ಖಾದಿ ಸೀರೆ, ಸಲ್ವಾರ್, ದುಪ್ಪಟ್ಟಾ, ಶಾಲು, ಪೈಜಾಮ ಎಲ್ಲವೂ ತೊಡಲು ಯೋಗ್ಯವಾದ ಉಡುಗೆಯೇ.

■ ಉಮಾ ವೇಣೂರು

ಸೀರೆ ರೇಷ್ಮೆಯದ್ದೇ ಇರಲಿ, ಸಿಂಥೆಟಿಕ್ ಇರಲಿ, ಖಾದಿಯೇ ಇರಲಿ ಸಾಂಪ್ರದಾಯಿಕವಾದ ಈ ಉಡುಗೆ ಮಹಿಳೆಗೆ ಶೋಭೆ ತರುವುದಂತೂ ಖಂಡಿತ. ಈಗಿನ ಫ್ಯಾಷನ್ ಜಮಾನದಲ್ಲಿ ಸಾಂಪ್ರದಾಯಿಕ ಮನೋಭಾವದ ಮಹಿಳೆ ಕಾಟನ್ ಸೀರೆಗಿಂತಲೂ ಕೈಮಗ್ಗದ ಖಾದಿ ಸೀರೆಯನ್ನೇ ಹೆಚ್ಚು ಇಷ್ಟಪಡುತ್ತಾಳೆ. ಬಣ್ಣ, ವಿನ್ಯಾಸಗಳಲ್ಲಿ ಕಣ್ಣಿಗೆ ಒಪ್ಪುವಂತಹ ಖಾದಿ ಸೀರೆಗಳು ಇಂದಿನ ಮಹಿಳೆಯರ ಮೆಚ್ಚು. ಇದರ ಜತೆಗೆ ಸಲ್ವಾರ್, ದುಪ್ಪಟ್ಟಾ, ಕುರ್ತಾಗಳೂ ಮಾರುಕಟ್ಟೆಯಲ್ಲಿ ಬಹಳ ಬೇಡಿಕೆ ಗಳಿಸಿವೆ.

ಖಾದಿ ಉಡುಪು ಎಂದ ಕೂಡಲೆ ಅದರ ನಿರ್ವಹಣೆ ಕಷ್ಟ ಎಂಬ ಭಾವನೆ ಇನ್ನೂ ಹಲವರಲ್ಲಿದೆ. ಜತೆಗೆ ಖಾದಿ ಎಂದರೆ ಒರಟು ಎಂಬ ಭಾವನೆಯೂ ಅನೇಕರಲ್ಲಿದೆ. ಬಿಸಿಲು ಹೆಚ್ಚಿದ್ದರೂ, ಮೈಕೊರೆಯುವ ಚಳಿ ಇದ್ದರೂ ಖಾದಿ ಸೀರೆ ಯಾವತ್ತೂ ಮೈಗೆ ಹಿತವೆನಿಸುತ್ತದೆ. ಅಲ್ಲದೆ ಖಾದಿ ಸೀರೆ, ಉಡುಪು ತೊಟ್ಟರೆ ಅದು ಹಿತವಾದ ಅನುಭವವನ್ನೇ ನೀಡುತ್ತದೆ.

ಸೀರೆಗಳಲ್ಲಿ ರೇಷ್ಮೆ ಸೀರೆಗೆ ಅಗ್ರಪಟ್ಟ ಇದ್ದರೂ ಖಾದಿ ಸೀರೆಗೆ ಬೇಡಿಕೆ ದಿನೇ ದಿನೇ ಹೆಚ್ಚುತ್ತಿದೆ. ವಯಸ್ಸಾದ ಮಹಿಳೆಯರು ಮಾತ್ರ ಖಾದಿ ಸೀರೆ ಉಡುತ್ತಾರೆ ಎಂಬ ಭಾವನೆಯನ್ನು ಹಿಂದಕ್ಕೆ ತಳ್ಳಿ ಈಗ ಯುವತಿಯರೂ, ಫ್ಯಾಷನೆಬಲ್ ಮಹಿಳೆಯರು, ಹುಡುಗಿಯರು, ಸಿನಿಮಾ ತಾರೆಯರು ಖಾದಿ ಸೀರೆಯತ್ತ ಒಲವು ತೋರಲಾರಂಭಿಸಿದ್ದಾರೆ. ಇದು ಇತ್ತೀಚೆಗೆ ಬೆಂಗಳೂರಿನಲ್ಲಿ ನಡೆದ ಖಾದಿ ಸೀರೆ ಮಾರಾಟ ಮೇಳದಲ್ಲಿ ಸಾಬೀತಾಯಿತು. ಸಿನಿಮಾ ನಟಿಯರು ಮೇಳಕ್ಕೆ ಬಂದು ಮನಸೋ ಇಚ್ಛೆ ಖಾದಿ ಸೀರೆ ಖರೀದಿಸಿದರು.

ಹದಿ ವಯಸ್ಸಿನ ಹುಡುಗಿಯರಿಂದ ಹಿಡಿದು ಫ್ಯಾಷನ್ ಬಯಸುವ ಅಜ್ಜಿಯವರೆಗೂ ಖಾದಿ ಉಡುಗೆ ಖರೀದಿ ಜೋರಾಗಿತ್ತು. ಪಶ್ಚಿಮ ಬಂಗಾಳ, ಛತ್ತೀಸ್‌ಗಡ ಮುಂತಾದ ರಾಜ್ಯಗಳಲ್ಲಿ ಅತ್ಯುತ್ತಮ ಗುಣಮಟ್ಟದ ಖಾದಿ ಸಿಗುತ್ತದೆ. ಉತ್ತರ ಕರ್ನಾಟಕದ ಹಲವು ಭಾಗಗಳಲ್ಲಿ ಖಾದಿಯಿಂದ ನೇಯ್ದ ಸೀರೆ, ಕೈಮಗ್ಗದ ಸಲ್ವಾರ್‌ಗಳು ಹೊಸ ಆಕರ್ಷಕ ಮಾದರಿಗಳಲ್ಲಿ ಸಿಗುತ್ತದೆ. ಆಧುನಿಕ ಜೀವನಶೈಲಿಗೆ ಒಗ್ಗುವಂತೆ ಖಾದಿ ಉಡುಗೆ ಇದೀಗ ಮಾರುಕಟ್ಟೆಯಲ್ಲಿ ಲಭ್ಯ.

ಖಾದಿ ಬಟ್ಟೆ ಮೊದಲ ಬಾರಿಗೆ ಒಗೆದಾಗ ಹಿಂಜಿದಂತೆ ಆಗುತ್ತದೆ. ಇದನ್ನು ತಪ್ಪಿಸಲು ಒಗೆದು, ಡ್ರೈ ಮಾಡಿದರೆ ಚೆನ್ನಾಗಿರುತ್ತದೆ. ಜತೆಗೆ ಇಸ್ತ್ರಿ ಹಾಕಿದರೆ ಗರಿ ಗರಿಯಾದ ಉಡುಪು ಧರಿಸಲು ಯೋಗ್ಯವೆನಿಸುತ್ತದೆ. ಗುಣಮಟ್ಟದ ಖಾದಿ ಬಟ್ಟೆ ಎಷ್ಟೇ ದಿನಗಳಾದರೂ ಬಣ್ಣ ಮಾಸುವುದಿಲ್ಲ, ಅಂದಗೆಡುವುದಿಲ್ಲ. ಖಾದಿ ಎಂದರೆ ತಂಪು ಕೂಲ್ ಕೂಲ್. ಚಳಿಗಾಲಕ್ಕೆ ಬೆಚ್ಚನೆ ಅನುಭವ, ಸೆಕೆಗಾಲಕ್ಕೆ ತಣ್ಣಗಿನ ಭಾವ.. ಇದು ಖಾದಿ ಬಟ್ಟೆಯ ವಿಶೇಷತೆ.



ಸೀರೆ ಮಾತ್ರವಲ್ಲದೆ ಚೂಡಿದಾರ್, ಕುರ್ತಾ, ಜುಬ್ಬಾ, ಲುಂಗಿ, ಬೆಡ್‌ಸ್ಪ್ರೆಡ್, ಬೆಡ್‌ಶೀಟ್‌ಗಳನ್ನೂ ಬಳಸಲಾಗುತ್ತದೆ. ಒಗೆದಷ್ಟೂ ತೆಳುವಾಗುವ, ಹಗುರವಾಗುವ ಈ ಬಟ್ಟೆ ಗುಣಮಟ್ಟದಲ್ಲಿ ಇನ್ನೂ ಉತ್ತಮವಾಗುತ್ತಾ ಹೋಗುತ್ತದೆ. ಒಂದು ಸೀರೆ ತಯಾರಾಗಬೇಕಾದರೆ ನೇಕಾರರ ಶ್ರಮ ವಿಪರೀತ. ಹೀಗಾಗಿ ಇದಕ್ಕೆ ತೆರುವ ಬೆಲೆ ದುಬಾರಿ ಎನಿಸಲಾರದು. ಉಳಿದ ಬಟ್ಟೆಯಿಂದ ಕೈಚೀಲ, ಕುಶನ್ ಕವರ್, ಕುಚ್ಚು ಮುಂತಾದವನ್ನು ತಯಾರಿಸಬಹುದು.

## ಕಾಲದ ಹಂಗಿಲ್ಲ..

ಖಾದಿ ಉಡುಪಿಗೆ ಕಾಲದ ಹಂಗಿಲ್ಲ. ಎಲ್ಲ ಕಾಲಕ್ಕೂ ಸೂಕ್ತವಾಗುವ, ಎಲ್ಲ ವಯೋಮಾನಕ್ಕೂ ಒಪ್ಪುವ, ಫ್ಯಾಷನ್‌ಗೂ ಸಂಪ್ರದಾಯಕ್ಕೂ ಸೈ ಎನ್ನುವ ಉಡುಪು ಖಾದಿ. ಖಾದಿ ಸೀರೆ, ಸಲ್ವಾರ್, ದುಪ್ಪಟ್ಟಾ, ಶಾಲು, ಪೈಜಾಮ ಎಲ್ಲವೂ ತೊಡಲು ಯೋಗ್ಯವಾದ ಉಡುಗೆಯೇ. ಕಾಲಕ್ಕೆ ತಕ್ಕಂತೆ ನಮ್ಮ ದಿರಿಸು ಬದಲಾದರೂ ಖಾದಿ ಬಟ್ಟೆಯಲ್ಲೂ ಮಾರ್ಪಾಡು ಆಗುತ್ತಿರುತ್ತದೆ. ಗುಣಮಟ್ಟ ಮಾತ್ರ ಅದೇ ರೀತಿಯಲ್ಲಿರುತ್ತದೆ.

ಸಿಂಥೆಟಿಕ್ ಸೀರೆ, ಉಡುಪು ಕೆಲವೊಮ್ಮೆ ಔಟ್‌ಡೇಟೆಡ್ ಆಗುವುದುಂಟು. ಆದರೆ ಖಾದಿ ಮತ್ತು ರೇಷ್ಮೆ ಎಂದಿಗೂ ಔಟ್ ಆಫ್ ಫ್ಯಾಷನ್ ಆಗುವುದೇ ಇಲ್ಲ ಎಂಬುದು ಫ್ಯಾಷನ್ ತಜ್ಞರ ಅಭಿಮತ. ಜತೆಗೆ ಬಡವರಿಂದ ಹಿಡಿದು ಶ್ರೀಮಂತರ ವರೆಗೆ ಯಾರು ಬೇಕಾದರೂ ಖಾದಿ ಬಟ್ಟೆ ಧರಿಸಿ ಖುಷಿ ಪಡಬಹುದು. ಏಕೆಂದರೆ ಬಡವರಿಗೂ ಖಾದಿ ಉಡುಪು ಕೈಗೆಟುಕುವಂತಿದೆ.

ಸೌಂದರ್ಯ ಪ್ರಿಯರು ಹಾಗೂ ಫ್ಯಾಷನ್‌ಪ್ರಿಯರಿಗೆ ಖಾದಿ ಉಡುಪು ಆಪ್ಯಾಯಮಾನ. ಇದು ಸಖತ್ ಲುಕ್ ಹಾಗೂ ಗಂಭೀರತೆಯನ್ನು ಪ್ರತಿಬಿಂಬಿಸುವ ಉಡುಗೆ.

ಖಾದಿ ಸೀರೆ ಹಗುರವಾಗಿದ್ದು ತೊಟ್ಟುಕೊಳ್ಳಲು ಆರಾಮದಾಯಕವಾಗಿದೆ. ಇದು ಪ್ರೊಫೆಷನಲ್ ಲುಕ್ ನೀಡಲು ಸಹಕಾರಿ ಎನ್ನುತ್ತಾರೆ ಖಾದಿ ಬಟ್ಟೆಯನ್ನೇ ತೊಡುವ ಹಾಗೂ ಖಾದಿ ಉಡುಪನ್ನು ಬಹುವಾಗಿ ಪ್ರೀತಿಸುವ ಡಾ. ಅಂಜನಾ ಶಾಸ್ತ್ರಿ.

ಖಾದಿ ದುಪ್ಪಟ್ಟಾ ಸೌಂದರ್ಯಕ್ಕೆ ಹೆಚ್ಚಿನ ಒತ್ತಾಸೆ ನೀಡುತ್ತದೆ. ಖಾದಿಯ ವಿವಿಧ ವಿಧಗಳಾದ ಫ್ಯಾಬ್ರಿಕ್ ಮಿಶ್ರಿತ ಖಾದಿ, ಶುದ್ಧ ಖಾದಿ ಬಳಸುವವರಿಗೆ ಮೆಚ್ಚುಗೆಯಾಗುವುದರಲ್ಲಿ ಸಂಶಯವಿಲ್ಲ.

ಖಾದಿ ಉಡುಗೆ ಬರೀ ಮಹಿಳೆಯರಿಗಷ್ಟೇ ಸೀಮಿತವಲ್ಲ. ಪುರುಷರು ಕೂಡ ಖಾದಿ ಪೈಜಾಮ ತೊಟ್ಟು ಸಖತ್ತಾಗಿ ಮಿಂಚುತ್ತಿದ್ದಾರೆ. ಸಣ್ಣ ಹುಡುಗರು, ಯುವಕರು ಖಾದಿ ಪೈಜಾಮ, ಜುಬ್ಬಾ ತೊಟ್ಟರೆ ಸಾಂಪ್ರದಾಯಿಕ ಲುಕ್ ಜತೆಗೆ ಕಳೆಕಳೆಯಾಗಿ ಕಾಣಬಹುದು. ಖಾದಿ ಬಟ್ಟೆಯಿಂದ ತಯಾರಿಸಿದ ಬ್ಯಾಗ್, ಪರ್ಸ್‌ಗಳು ಕೂಡ ಮಿಕ್ಸ್ ಅಂಡ್ ಮ್ಯಾಚ್ ಮಾಡುವವರಿಗೆ ಅನುಕೂಲ. ಫ್ಯಾಷನೆಬಲ್ ಆಗಿ ಕಾಣಬೇಕು ಎನ್ನುವವರಿಗೂ ಸೂಕ್ತವಾದಂಥವು.

ಸಾಮಾನ್ಯವಾಗಿ ಖಾದಿ ಜುಬ್ಬಾ 400 ರೂಪಾಯಿಯಿಂದ ನಾಲ್ಕು ಸಾವಿರ ರೂಪಾಯಿಗಳವರೆಗೂ ಸಿಗುತ್ತದೆ. ಖಾದಿ ಸೀರೆ ಐನೂರರಿಂದ ಮೂರು ಸಾವಿರ ರೂಪಾಯಿಗಳವರೆಗೂ ಲಭ್ಯವಿದೆ. ■